ಹುಬ್ಬಳ್ಳಿ–ಧಾರವಾಡ ಮಹಾನಗರ ಪ್ರದೇಶದಲ್ಲಿ ಕುಡಿಯುವ ನೀರು ಪೂರೈಕೆ ಹಾಗೂ ಒಳ ಚರಂಡಿ ವ್ಯವಸ್ಥೆ ಬಗ್ಗೆ.

೧೧೬. ಶ್ರೀ ಎಸ್. ಆರ್. ಮೋರೆ (ಧಾರವಾಡ ಶಹರ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧) ಹುಬ್ಬಳ್ಳಿ ಧಾರವಾಡ ಮಹಾನಗರ ಪ್ರದೇಶದಲ್ಲಿ ಒಳಚರಂಡಿ ಯೋಜನೆಯ ವಿವರಗಳೇನು? ಈವರೆಗೆ ಆದ ಪ್ರಗತಿ ಏನು ?

೨) ಹುಬ್ಬಳ್ಳಿ–ಧಾರವಾಡ ಮಹಾನಗರ ಪ್ರದೇಶದಲ್ಲಿ ನೀರು ಪೂರೈಕೆಯ ಕೊಳವೆ ಯೋಜನೆಯಲ್ಲಿ ಜಲಮಂಡಲಿ ಕೈಗೊಂಡ ಕ್ರಮ ಹಾಗೂ ಪ್ರಗತಿ ಏನು ?

೩) ನೀರು ಸಂಗ್ರಹ ಹಾಗೂ ನೀರು ಪೂರೈಕೆಗಳನ್ನು ಒಂದೇ ಸಂಸ್ಥೆಗೆ ವಹಿಸಿಕೊಡುವ ಸಲಹೆ ಯಾವ ಹಂತದಲ್ಲಿದೆ;

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

೧. ಹುಬ್ಬಳ್ಳಿ–ಧಾರವಾಡ ಮಹಾನಗರಕ್ಕೆ ಒಳಚರಂಡಿ ವ್ಯವಸ್ಥೆ ಹಾಗೂ ಕೊಳಚೆ ನೀರನ್ನು ಶುದ್ಧೀಕರಿಸಲು ವಿಶ್ವಬ್ಯಾಂಕಿನ ನೆರವಿನ ಅಡಿಯಲ್ಲಿ ರೂ. ೫೩ ಕೋಟಿಗೆ ಒಂದು ಸಮಗ್ರ ಯೋಜನೆಯನ್ನು ತಯಾರಿಸಲಾಗಿದೆ.

ಈ ಯೋಜನೆಯಲ್ಲಿ ಹಾಲಿ ಹುಬ್ಬಳ್ಳಿ ಧಾರವಾಡ ಮಹಾನಗರದ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದಿರುವ ಪ್ರದೇಶಗಳಿಗೆ ಈ ವ್ಯವಸ್ಥೆಯನ್ನು ವಿಸ್ತರಿಸಲು ಹಾಗೂ ಕೊಳಚೆ ನೀರನ್ನು ಶುದ್ಧೀಕರಿಸಿದ ನಂತರ ಈ ನೀರನ್ನು ವಿಸರ್ಜಿಸಲು ಯೋಜಿಸಲಾಗಿದೆ.

ಈ ಯೋಜನೆಯನ್ನು ಮಹಾನಗರಪಾಲಿಕೆಯ ಆರ್ಥಿಕ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ವಿಶ್ವ ಬ್ಯಾಂಕಿನವರೊಡನೆ ಸಮಾಲೋಚನೆ ನಡೆಸಿದ ನಂತರ ಯೋಜನೆಗೆ ಮಂಜೂರಾತಿ ಪಡೆಯಲು ಕ್ರಮ ಕೈಗೊಳ್ಳಬೇಕಾಗಿದೆ.

೨. ಹುಬ್ಬಳ್ಳಿ–ಧಾರವಾಡ ಮಹಾನಗರಗಳಿಗೆ ೧೯೮೫ ರಿಂದ ೧೯೯೦ ರವರೆಗೆ ಒಟ್ಟು ೪೮೦ ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು ಇವುಗಳಲ್ಲಿ ೫೫ ಕೊಳವೆ ಬಾವಿಗಳು ವಿಫಲವಾಗಿದೆ. ಈ ಪೈಕಿ ೪೪೪ ಕೊಳವೆ ಬಾವಿಗಳಿಗೆ ಕೈ ಪಂಪುಗಳನ್ನು ಅಳವಡಿಸಲಾಗಿದೆ. ೨೯ ಕೊಳವೆ ಬಾವಿಗಳಿಗೆ ವಿದ್ಯುತ್ ಚಾಲಿತ ಪಂಪುಗಳನ್ನು ಅಳವಡಿಸಲಾಗಿದೆ. ಮೇಲ್ಕಾಣಿಸಿದ ೪೮೦ ಕೊಳವೆ ಬಾವಿಗಳ ಪೈಕಿ ಈ ಬೇಸಿಗೆಯಲ್ಲಿ ೯೬ ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು ಇವುಗಳಲ್ಲಿ ಒಂದು ಕೊಳವೆ ಬಾವಿ ವಿಫಲವಾಗಿದೆ. ಉಳಿದ ೯೫ ಕೊಳವೆ ಬಾವಿಗಳಿಗೆ ಕೈಪಂಪುಗಳನ್ನು ಅಳವಡಿಸಲಾಗಿದೆ.

೩. ನೀರಸಾಗರ ಜಲಾಶಯದಿಂದ ಮತ್ತು ಮಲಪ್ರಭಾ ಜಲಾಶಯದಿಂದ ಜಲಸಂಗ್ರಹಾಗಾರದ ವರೆಗೆ ಮಂಡಲಿಯು ನಿರ್ವಹಿಸುತ್ತಿದ್ದು ವಿತರಣಾ ವ್ಯವಸ್ಥೆಯನ್ನು ನಗರ ಪಾಲಿಕೆಯವರು ನಿರ್ವಹಿಸುತ್ತಿದ್ದಾರೆ. ಈ ಎರಡೂ ವ್ಯವಸ್ಥೆಯನ್ನು ಒಂದೇ ಸಂಸ್ಥೆಗೆ ವಹಿಸಿಕೊಡುವುದು ಆಡಳಿತಾತ್ಮಕ ಕಾರ್ಯನೀತಿಯ ವಿಷಯವಾಗಿರುವುದರಿಂದ ಸರ್ಕಾರವು ಈ ವಿಷಯದಲ್ಲಿ ಇನ್ನು ತೀರ್ಮಾನ ಕೈಗೊಳ್ಳಬೇಕಾಗಿದೆ.

ಶಿವಮೊಗ್ಗದ ಕುವೆಂಪು ರಂಗಮಂದಿರದ ಕಟ್ಟಡ ಸ್ಥಗಿತ

೧೧೭. ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ).—ಮಾನ್ಯ ಶಿಕ್ಷಣ ಯುವಜನ ಸೇವಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ನಗರದ ಕುವೆಂಪು ರಂಗ ಮಂದಿರ ಕಟ್ಟಡ ಕಾರ್ಯ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ,

ಆ) ಇದುವರೆಗೆ ಎಷ್ಟು ಹಣ ವಿನಿಯೋಗವಾಗಿದೆ ?

ಇ) ಈ ರಂಗಮಂದಿರದ ಕಾರ್ಯ ಪೂರ್ಣಗೊಳಿಸಲು ಇನ್ನು ಎಷ್ಟು ಹಣ ಬೇಕಾಗುವುದು;